ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 :** **ದಿನಾಂಕ: 4–12–2014**

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | <u>ಕರ್ನಾಟಕ ರಾಜ್ಯ ಪೊಲೀಸ್ : ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ:</u><br><br><u>ಮುಖ್ಯ ಅತಿಥಿ:</u><br><br>ಶ್ರೀ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br><u>ಅಧ್ಯಕ್ಷತೆ :</u><br><br>ಶ್ರೀ ಕೆ. ಜೆ. ಜಾರ್ಜ್, ಗೃಹ ಸಚಿವರು. | 05-12-2014 ಶುಕ್ರವಾರ ಬೆಳಿಗ್ಗೆ 8–30 ಗಂಟೆಗೆ | ಕೆ.ಎಸ್.ಆರ್.ಪಿ. ಪೆರೇಡ್ ಮೈದಾನ, ಕೋರಮಂಗಲ, ಬೆಂಗಳೂರು. |
| 2. | <u>ದಕ್ಷಿಣ ಭಾರತ ವಿಜ್ಞಾನ ನಾಟಕೋತ್ಸವ :</u><br><br><u>ಉದ್ಘಾಟನೆ:</u><br><br>ಶ್ರೀ ಸಿ. ಬಸವಲಿಂಗಯ್ಯ, ನಿರ್ದೇಶಕರು, ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು ಕೇಂದ್ರ | 05-12-2014 ಶುಕ್ರವಾರ ಬೆಳಿಗ್ಗೆ 9–30 ಗಂಟೆಗೆ | ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಬಾ ರಸ್ತೆ, ಬೆಂಗಳೂರು. |
| 3. | **Indian Red Cross Society : International Volunteers' Day-2014:**<br><br>**<u>Inauguration:</u>** | **05-12-2014 Friday 12-30 PM** | **Henry Dunant Hall, No. 26, Red Cross Bhavan, Race Course Road, Bangalore.** |

| | | | |
|---|---|---|---|
| | **Shri P.S. Vastrad,**<br>**Commissioner, Health and Family Welfare Services**<br><br>**<u>Chief Guest:</u>**<br><br>**Shri B. G. Nandakumar,**<br>**Commissioner, Department of Collegiate Education, Government of Karnataka.** | | |
| **4.** | **Farewell Address to Justice Shri Dilip B. Bhosale, Judge, High Court of Karnataka on his transfer as Judge of High Court of Telangana and Andhra Pradesh.** | 05-12-2014<br>**Friday**<br>**1-45 PM** | **Court Hall No. 1, Principal Bench of the High Court of Karnataka, Bangalore.** |
| **5.** | <u>ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ:</u><br><br><u>ಮುಖ್ಯ ಅತಿಥಿಗಳು:</u><br><br>ಶ್ರೀ ವಜುಭಾಯಿ ವಾಲಾ,<br>ಘನತೆವೆತ್ತ ರಾಜ್ಯಪಾಲರು, ಕರ್ನಾಟಕ<br><br><u>ಅಧ್ಯಕ್ಷತೆ:</u><br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br><u>ಗೌರವ ಅತಿಥಿಗಳು:</u><br><br>ಶ್ರೀ ಕೆ. ಜೆ. ಜಾರ್ಜ್,<br>ಗೃಹ ಖಾತೆ ಸಚಿವರು. | **05-12-2014** ಶುಕ್ರವಾರ<br>ಸಂಜೆ 4-15 ಗಂಟೆಗೆ | ರಾಜಭವನ,<br>ಬೆಂಗಳೂರು |

| | | | |
|---|---|---|---|
| **6.** | ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ :<br><br>"ನಿರ್ಭಯಾ" ಸಾಕ್ಷ್ಯಚಿತ್ರದ ಬಿಡುಗಡೆ ಮತ್ತು ಪೂರ್ವ ಪ್ರದರ್ಶನ ಕಾರ್ಯಕ್ರಮ<br><br>ಸಮ್ಮುಖ:<br><br>ಶ್ರೀ ಆರ್. ರೋಷನ್ ಬೇಗ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆ ಸಚಿವರು.<br><br>ಶ್ರೀ ಕೆ. ಜೆ. ಜಾರ್ಜ್, ಗೃಹ ಸಚಿವರು | **05-12-2014** ಶುಕ್ರವಾರ ಸಂಜೆ 5–30 ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋದ ನೂತನ ಚಿತ್ರಮಂದಿರ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು. |

## ಪತ್ರಿಕಾ ಪ್ರಕಟಣೆ

## ರಾಷ್ಟ್ರೀಯ 2 ನೇ ಲೋಕ ಅದಾಲತ್‌ನಲ್ಲಿ 6 ಲಕ್ಷಕ್ಕೂ ಹೆಚ್ಚು ಪ್ರಕರಣ ಇತ್ಯರ್ಥ ನಿರೀಕ್ಷೆ:

**ಮುಖ್ಯ ನ್ಯಾಯಮೂರ್ತಿ ಶ್ರೀ ಡಿ.ಎಚ್. ವಘೇಲ**

ಬೆಂಗಳೂರು, ಡಿ. 4 (ಕರ್ನಾಟಕ ವಾರ್ತೆ)–

ಈ ವರ್ಷ ಸೆಪ್ಟೆಂಬರ್ 1 ರಿಂದ ಆರಂಭವಾಗಿರುವ 2 ನೇ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 6 ಲಕ್ಷಕ್ಕೂ ಹೆಚ್ಚು ವ್ಯಾಜ್ಯಪೂರ್ವ ಪ್ರಕರಣಗಳು ಇತ್ಯರ್ಥ ಆಗುವ ನೀರಿಕ್ಷೆ ಇದೆ ಎಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಶ್ರೀ ಡಿ.ಎಚ್. ವಘೇಲ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಲೋಕ ಅದಾಲತ್ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದ್ದು 2013 ನವೆಂಬರ್‌ನಲ್ಲಿ ಆಯೋಜಿಸಿದ್ದ ಪ್ರಥಮ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 95178 ಪ್ರಕರಣಗಳು, 12ನೇ ಏಪ್ರಿಲ್ 2014 ರಂದು ಆಯೋಜಿಸಲಾಗಿದ್ದ ಮೆಗಾ ಲೋಕ ಅದಾಲತ್‌ನಲ್ಲಿ 2.25 ಲಕ್ಷ ಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥವಾಗಿವೆ. ಈ ಬಾರಿ ಇನ್ನೂ ಹೆಚ್ಚಿನ ಸಂಖ್ಯೆಯ ಪ್ರಕರಣಗಳು ಇತ್ಯರ್ಥವಾಗುತ್ತಿವೆ. ಇದರಲ್ಲಿ ಜನರಲ್ಲಿ ಮೂಡಿರುವ ಜಾಗೃತಿಯೆ ಕಾರಣ ಎಂದು ಅಭಿಪ್ರಾಯಪಟ್ಟರು.

ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳ ಪ್ರಮಾಣದ ಮೇಲೆಯೂ ಇದು ಪರಿಣಾಮ ಬೀರಿದೆ. ಎಲ್ಲಾ ಪ್ರಕರಣಗಳು ನ್ಯಾಯಾಲಯದ ಮುಂದೆಯೆ ವಿಚಾರಣೆ ಆಗುವ ಅಗತ್ಯವಿಲ್ಲ ಎನ್ನುವುದು ಜನರಿಗೆ ಮನದಟ್ಟಾಗುತ್ತಿದೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಹಾಗೂ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರಿದ ಕಾರ್ಯಾಧ್ಯಕ್ಷ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್ ಅವರು, ಇದೇ ಡಿಸೆಂಬರ್ 6 ಲೋಕ ಅದಾಲತ್‌ನ ಅಂತಿಮ ದಿನವಾಗಿದ್ದು ಅಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಹಾಗೂ ಉಚ್ಚ

ನ್ಯಾಯಾಲಯದಲ್ಲಿ ವಿಚಾರಣೆಗಳು ನಡೆಯಲಿವೆ. ಉಚ್ಚ ನ್ಯಾಯಾಲಯದಲ್ಲಿ 15 ಮಂದಿ ನ್ಯಾಯಾಧೀಶರು ಬೆಳಗ್ಗೆ 11-30 ರಿಂದ ಸಂಜೆ 5-30 ರವರೆಗೆ ಲೋಕ ಅದಾಲತ್‌ನ ಪ್ರಕರಣಗಳ ವಿಚಾರಣೆ ನಡೆಸುವರೆಂದು ತಿಳಿಸಿದರು.

ವಿವಾದ/ಪ್ರಕರಣಗಳನ್ನು ಹೊಂದಿರುವ ಸಾರ್ವಜನಿಕರು 2 ನೇ ರಾಷ್ಟ್ರೀಯ ಜನತಾ ನ್ಯಾಯಾಲಯದ ಪ್ರಯೋಜನ ಪಡೆಯುವುದಕ್ಕಾಗಿ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮತ್ತು ಪ್ರತಿ ತಾಲ್ಲೂಕಿನಲ್ಲಿರುವ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳನ್ನು ಸಂಪರ್ಕಿಸುವಂತೆ ಅವರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀ ಅಶೋಕ ಜಿ. ನಿಜಗಣ್ಣವರ ಅವರು ಉಪಸ್ಥಿತರಿದ್ದರು.

## ಕುವೆಂಪು ಚಿತ್ರ ಸಂಪುಟ ಲೋಕಾರ್ಪಣೆ

ಬೆಂಗಳೂರು, ಡಿಸೆಂಬರ್ 4 (ಕರ್ನಾಟಕ ವಾರ್ತೆ)

ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ವತಿಯಿಂದ ಡಿಸೆಂಬರ್ 6 ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ " ಕುವೆಂಪು ಚಿತ್ರ ಸಂಪುಟ ಲೋಕಾರ್ಪಣೆ" ಸಮಾರಂಭವನ್ನು ಏರ್ಪಡಿಸಲಾಗಿದೆ. ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಚಿತ್ರ ಸಂಪುಟ ಲೋಕಾರ್ಪಣೆ ಮಾಡುವರು.

ಮುಖ್ಯ ಅತಿಥಿಗಳಾಗಿ ವಿಧಾನಸಭಾಧ್ಯಕ್ಷ ಶ್ರೀ ಕಾಗೋಡು ತಿಮಪ್ಪ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಶ್ರೀಮತಿ ಉಮಾಶ್ರೀ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆ ಸಚಿವ ಶ್ರೀ ಕಿಮ್ಮನೆ ರತ್ನಾಕರ ಪಾಲ್ಗೊಳ್ಳುವರು. ಚಿತ್ರ ಸಂಪುಟ ಕುರಿತು ಸಾಹಿತಿ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಅವರು ಮಾತನಾಡುವರು. ಪ್ರತಿಷ್ಠಾನದ ಅಧ್ಯಕ್ಷ ನಾಡೋಜ ಪ್ರೊ. ಹಂ.ಪ. ನಾಗರಾಜಯ್ಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಸಮ:ಬಾಬು:ಜಿಪಿಆರ್.

## "ಚಾರ್ ಧಾಮ್" ಯಾತ್ರಾ ಧನಸಹಾಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಡಿಸೆಂಬರ್ 4 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯದಿಂದ "ಚಾರ್ ಧಾಮ್" (ಬದರಿನಾಥ್, ಕೇದಾರನಾಥ್, ಗಂಗೋತ್ರಿ ಮತ್ತು ಯಮುನೋತ್ರಿ) ಯಾತ್ರೆ ಕೈಗೊಂಡ ಯಾತ್ರಿಕರಿಗೆ ಸರ್ಕಾರ ಪ್ರೋತ್ಸಾಹ ಧನ ನಿಡಲು ಉದ್ದೇಶಿಸಿರುತ್ತದೆ. ಕರ್ನಾಟಕ ಖಾಯಂ ನಿವಾಸಿಗಳು, ಸರ್ಕಾರದ ಆದೇಶ ಸಂಖ್ಯೆ ಕಂಇ 179ಮುಅಬಿ 2014, ದಿನಾಂಕ 07-11-2014 ರಲ್ಲಿ ನೀಡಿರುವ ಮಾರ್ಗಸೂಚಿಗಳ ಷರತ್ತುಗಳಿಗೆ ಒಳಪಟ್ಟವರು ಮಾತ್ರ ಧನ ಸಹಾಯ ಪಡೆಯಲು ಅರ್ಹರಾಗಿರುತ್ತಾರೆ. ಈ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ವಾಸವಿರುವ ವಿಳಾಸವನ್ನು ಪರಿಗಣಿಸಲಾಗುವುದು.

ಸರ್ಕಾರದ ಮಾರ್ಗಸೂಚಿಗಳಿಗೆ ಒಳಪಟ್ಟು ಧನ ಸಹಾಯ ಪಡೆಯಲು ಇಚ್ಛಿಸುವ ಯಾತ್ರಿಕರು ತಾವು ಯಾತ್ರೆ ಮುಗಿಸಿದ ಬಗ್ಗೆ ಪಡೆಯುವ ಪ್ರಮಾಣ ಪತ್ರದ ದಿನಾಂಕದಿಂದ ನಾಲ್ಕು ತಿಂಗಳ ಒಳಗಾಗಿ ನಿಗದಿತ

ನಮೂನೆಯಲ್ಲಿ ಅರ್ಜಿಯನ್ನು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಆಯುಕ್ತರ ಕಚೇರಿಯಲ್ಲಿ ಖುದ್ದು ಪಡೆದು ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4 ನೇ ಮಹಡಿ, ಮಲೆ ಮಹದೇಶ್ವರ ವಾರ್ತಾ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 18. ಈ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಮ:ಬಾಬು:ಜಿಪಿಆರ್.

# Applications invited for financial assitance for 'Char Dham Yatra"

**Bangaloe, December 4 (Karnataka Information)**

**Government has proposed to give financial assistance to the pilgrims from the state, who visit Char Dham (Badrinath, Kedarnath, Gangothri & Yamunothri). The permanent residents of Karnataka and those who comply the terms and conditions mentioned in the Government Order No. Kame 179/MUABI 2014, dated 07-11-2014, are eligible for subsidy under this scheme. The pilgrims who wish to avail the benefit of this scheme should fill the details in the prescribed pro-forma and submit it to the Commissioner, Hindu Religious Institutions and Charitable Endowments, 4th Floor, Male Mahadeshwara Vartha Bhavan, Alur Venkatarao Road, Chamrajpet, Bangalore - 560 018, within four months from the date of the certificate of completion of the pilgrimage.**

**For further information regarding this subject, contact the concerned officers at the above address, during the office working hours.**

**sm/babu/gpr.**

# ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಕಾರ್ಯಕ್ಕೆ ಸಹಕರಿಸುವಂತೆ ಸಾರ್ವಜನಿಕರಲ್ಲಿ ಮನವಿ

ಬೆಂಗಳೂರು, ಡಿಸೆಂಬರ್ 4 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗದ ಆಯೋಗದ ವತಿಯಿಂದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯನ್ನು ಎರಡು ತಿಂಗಳ ಒಳಗಾಗಿ ನಡೆಸಿ ವರದಿ ನೀಡಲಾಗುವುದೆಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ತಿಳಿಸಿದರು.

ಇಂದು ದೇವರಾಜ ಅರಸು ಭವನದಲ್ಲಿ ಈ ಸಮೀಕ್ಷೆ ಕುರಿತು ಹಮ್ಮಿಕೊಳ್ಳಲಾಗಿದ್ದ ಸಭೆಯಲ್ಲಿ ಈ ವಿಷಯ ತಿಳಿಸಿದರು. ಸಮಾಜದಲ್ಲಿ ಶೋಷಿತ, ನಿರ್ಲಕ್ಷಿತ ವರ್ಗದವರಿಗೆ ನ್ಯಾಯ ಕೊಡಿಸುವ ಹಾಗೂ ಸಮಾಜದಲ್ಲಿರುವ ಎಲ್ಲಾ ಜಾತಿ, ಉಪಜಾತಿಗಳ ಬಗೆಗೆ ಮಾಹಿತಿಯನ್ನು ಕಲೆಹಾಕುವ ನಿಟ್ಟಿನಲ್ಲಿ ಈ ಸಮೀಕ್ಷೆ ನಡೆಸಲಾಗುತ್ತಿದೆ. ಈ ಸಮೀಕ್ಷೆ ಪಾರದರ್ಶವಾಗಿರಬೇಕು. ಅಲ್ಲದೆ, ಜನರೂ ಸಹ ಸಮೀಕ್ಷೆ ನಡೆಸುವವರಿಗೆ ಸಹಕರಿಸಿ ಸರಿಯಾದ ಮಾಹಿತಿ ನೀಡಬೇಕು. ಸರ್ಕಾರದಲ್ಲಿ ಸಮೀಕ್ಷೆ ನಡೆಸುವ ಇಚ್ಛಾಶಕ್ತಿ, ಹಣ ಎರಡೂ ಇದೆ. ಜನರಿಗೆ ಸಾಮಾಜಿಕ ಸಮಾನತೆ ನೀಡುವ ಈ ಸಮೀಕ್ಷೆ ಹೆಚ್ಚಿನ ರೀತಿ ಪ್ರಚಾರ ಹಾಗೂ ಜಾಗೃತಿ ಮೂಡಿಸಲಿ ಎಂದವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಕಾಂತರಾಜ ಅವರು ಮಾತನಾಡಿ 1931 ರ ನಂತರ ಈ ರೀತಿಯಾದ ಸಮೀಕ್ಷೆ ನಡೆದಿರಲಿಲ್ಲ. ಹಿಂದುಳಿದ ವರ್ಗಗಳಿಗೆ ಸರ್ಕಾರ ಶೇ 27 ರಷ್ಟು ಮೀಸಲಾತಿ ಕಲ್ಪಿಸಿದೆ. ಈ ಸಮೀಕ್ಷೆ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಈ ಮೂರು ದೃಷ್ಟಿಕೋನಗಳಿಂದ ನಡೆಯುವುದರಿಂದ ಇದು ಹೆಚ್ಚು ಪ್ರಯೋಜನಕಾರಿಯಾಗಿದೆ. ಸರ್ಕಾರ ಈ ಸಮೀಕ್ಷೆಗಾಗಿ 117 ಕೋಟಿ ರೂ. ಬಿಡುಗಡೆ ಮಾಡಿದ್ದು, ಸಮೀಕ್ಷೆ ನಡೆಸುವವರು ಜನರ ಮನೆ ಬಾಗಿಲಿಗೆ ಬಂದು ಫಾರ್ಮ್ 3 ರಲ್ಲಿರುವ ವಿವಿಧ ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಾರೆ. ಜನರು ಈ ಸಮೀಕ್ಷೆಯಲ್ಲಿ ಸಹಕರಿಸಬೇಕಾಗಿ ಅವರು ವಿನಂತಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕವಿ ಡಾ. ಸಿದ್ದಲಿಂಗಯ್ಯ, ಈಗ ನಡೆಸುವ ಸಮೀಕ್ಷೆಯಿಂದ ನಮ್ಮ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ಸುಧಾರಿಸಲಿದೆ. ಶೋಷಿತ ವರ್ಗಗಳ ಪಟ್ಟಿಗಾಗಿ ಮಾಡುವ ಸಮೀಕ್ಷೆ ಸಮಾಜದ ಬಡವರ ಪರವಾಗಿದೆ. ಜಾತಿ ಜಾತಿ ನಡುವೆ ಸಮಾನತೆ ಏರ್ಪಡಿಸಬೇಕು. ಇದೊಂದು ಐತಿಹಾಸಿಕ ಕಾರ್ಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಕೆಲ ಜಾತಿಯ, ಹಿಂದುಳಿದ ವರ್ಗಗಳ ಏಳಿಗೆ ಈ ಸಮೀಕ್ಷೆಯಿಂದ ನಡೆಯಬೇಕೆಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರಾದ ಶ್ರೀ ಸಿ.ಎಂ. ಇಬ್ರಾಹಿಂ, ಮಾರ್ಚ್ ಒಳಗಾಗಿ ಸಮೀಕ್ಷೆ ಕಾರ್ಯಕ್ರಮ ಮುಗಿಯಲಿದೆ. ಸಮೀಕ್ಷೆಯನ್ನು ನಡೆಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸಭಾಪತಿ ಶ್ರೀ ಸುದರ್ಶನ್, ಹಿಂದುಳಿದ ಆಯೋಗದ ನೂತನ ಸದಸ್ಯರಾದ ಲಿಂಗಪ್ಪ, ಗೋಪಾಲಗೌಡ, ಗುರುಲಿಂಗಪ್ಪ, ಶರಣಪ್ಪ, ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷರಾದ ಡಾ: ಬಿ.ಕೆ. ರವಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಮುಂತಾದವರು ಉಪಸ್ಥಿತರಿದ್ದರು.

ಕವನ:ಜಿಪಿಆರ್:ಕೆಎಂ.

## ಕೆಆರ್‌ಎಸ್‌ನಲ್ಲಿ ತೇಲುವ ಪಂಜರದಲ್ಲಿ ಮೀನುಗಾರಿಕೆ: ಸಚಿವ ಅಭಯ ಚಂದ್ರ ಜೈನ್

ಬೆಂಗಳೂರು, ಡಿ. 4 (ಕರ್ನಾಟಕ ವಾರ್ತೆ)-

ಕೃಷ್ಣರಾಜ ಸಾಗರ ಜಲಾಶಯದಲ್ಲಿ ಕಳೆದ ವರ್ಷದಿಂದ ತೇಲುವ ಪಂಜರಗಳಲ್ಲಿ ಮೀನುಗಾರಿಕೆಯನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ ಎಂದು ಮೀನುಗಾರಿಕೆ ಹಾಗೂ ಯುವಸಬಲೀಕರಣ ರಾಜ್ಯ ಸಚಿವ ಶ್ರೀ ಕೆ. ಅಭಯಚಂದ್ರ ಜೈನ್ ಅವರು ಇಂದು ತಿಳಿಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಕೃಷ್ಣರಾಜ ಸಾಗರ ಜಲಾಶಯದಲ್ಲಿ ಈಗಾಗಲೇ 48 ಪಂಜರಗಳಲ್ಲಿ ಮೀನು ಸಾಕಾಣಿಕೆ ನಡೆಯುತ್ತಿದ್ದು, ಪ್ರತಿ ಪಂಜರದಲ್ಲಿ 5 ಸಾವಿರ ಮೀನು ಮರಿಗಳನ್ನು ಬಿಡಲಾಗಿದೆ ಎಂದರು. ನವ ಮಂಗಳೂರು ಬಂದರಿನಲ್ಲಿ ಈ ಹಿಂದೆ ಮೀನು ಸಾಕಾಣಿಕೆ ಹಾಗೂ ಮೀನು ಹಿಡಿಯಲು ಅವಕಾಶ ಇತ್ತು. ಈಗ ಸರಕು ಸಾಗಾಣಿಕೆಗೆ ಅವಕಾಶ ಕಲ್ಪಿಸಿರುವುದರಿಂದ ಮೀನುಗಾರಿಕೆಗೆ ನಿರ್ಬಂಧ ವಿಧಿಸಲಾಗಿದೆ. ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮೀನುಗಾರರಿಗೆ ಅನುಕೂಲ ಕಲ್ಪಿಸಿಕೊಡಲು ಸುಮಾರು 120 ಕೋಟಿ ವೆಚ್ಚದಲ್ಲಿ ಕುಳಾಯಿ ಬಂದರು ಹಾಗೂ 151 ಕೋಟಿ ರೂ. ವೆಚ್ಚದಲ್ಲಿ ಹೆಜಮಾಡಿ ಕೋಡಿಗಳಲ್ಲಿ ಹೊಸ ಮೀನುಗಾರಿಕಾ ಬಂದರು ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೆ, ತಲಾ 5 ಕೋಟಿ ವೆಚ್ಚದಲ್ಲಿ ಭಟ್ಕಳ ಹಾಗೂ ಕಾರವಾರ ಬಂದರುಗಳ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು. 50 ಕೋಟಿ ರೂ. ವೆಚ್ಚದಲ್ಲಿ ಮಂಗಳೂರು ಬಂದರು, 37 ಕೋಟಿ ರೂ. ವೆಚ್ಚದಲ್ಲಿ ಮಲ್ಪೆ ಬಂದರು ಹಾಗೂ 26 ಕೋಟಿ ರೂ. ವೆಚ್ಚದಲ್ಲಿ ಹೊನ್ನಾವರ ಬಂದರುಗಳ ವಿಸ್ತರಣಾ ಕಾರ್ಯ ಪ್ರಗತಿಯಲ್ಲಿ ಮುಂದಿನ ವರ್ಷ ಪೂರ್ಣಗೊಳ್ಳಲಿದೆ ಎಂದರು.

ಮೀನುಗಾರಿಕಾ ಚಟುವಟಿಕೆಗಳಿಗೆ ಸಂಬಂದಿಸಿದಂತೆ ಕೇಂದ್ರ ಸರ್ಕಾರ ಈ ಹಿಂದೆ ಶೇ. 75 ರಷ್ಟು ಹಣಕಾಸಿನ ನೆರವು ನೀಡುತ್ತಿದ್ದು, ಅದನ್ನು ಈಗ ಶೇ. 40 ಕ್ಕೆ ಇಳಿಸಿದೆ. ಇದರಿಂದಾಗಿ ಮೀನುಗಾರಿಕೆ ಅಭಿವೃದ್ಧಿಗೆ ತೊಂದರೆಯಾಗಿದೆ ಎಂದ ಸಚಿವರು, ಕೇಂದ್ರ ಸರ್ಕಾರ ಈ ವರೆಗೂ ಯಾವುದೇ ಹಣ ಬಿಡುಗಡೆ ಮಾಡಿಲ್ಲ ಎಂದು ತಿಳಿಸಿದರು.

ಒಳನಾಡು ಮೀನುಗಾರಿಕೆ ಈ ಹಿಂದೆ ಬಂಡವಾಳಶಾಹಿಗಳ ಹಿಡಿತದಲ್ಲಿತ್ತು. ಇದರಿಂದ ನಿಜವಾದ ಮೀನುಗಾರರಿಗೆ ತೊಂದರೆಯಾಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ಮೀನುಗಾರರ ಸಹಕಾರ ಸಂಘಗಳಿಗೆ ವಹಿಸಿಕೊಡಲು ತೀರ್ಮಾನಿಸಿದೆ ಎಂದರು. ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರಿಗೆ ಈ ಹಿಂದೆ ಹಿಡಿದ ಮೀನುಗಳಿಗೆ ಹಣ ನೀಡಲಾಗುತ್ತಿತ್ತು. ಅದರ ಬದಲಾಗಿ ಇನ್ನು ಮುಂದೆ ಹಣದ ಬದಲು, ಶೇ. 50 ರಷ್ಟು ಮೀನುಗಳನ್ನು ಕಡ್ಡಾಯವಾಗಿ ಅವರಿಗೇ ನೀಡಲು ತೀರ್ಮಾನಿಸಲಾಗಿದೆ ಎಂದರು.

ಸುಮಾರು 1200 ಕೋಟಿ ರೂ. ಮೊತ್ತದ ಒಂದು ಲಕ್ಷ ಮೆಟ್ರಿಕ್ ಟನ್ ಮೀನುಗಳನ್ನು ರಾಜ್ಯದಿಂದ ರಫ್ತು ಮಾಡಲಾಗುತ್ತಿದೆ ಎಂದ ಸಚಿವರು, ಮೀನು ಹಿಡಿಯುವ ಪ್ರತಿ ದೋಣಿಗೆ ತಿಂಗಳಿಗೆ 8 ಸಾವಿರ ಲೀಟರ್

ಡೀಸೆಲ್ ಅನ್ನು ಸಬ್ಸಿಡಿ ಮೂಲಕ ಸರಬರಾಜು ಮಾಡಲಾಗುತ್ತಿದ್ದು, 200 ಲೀ. ಸೀಮೆಎಣ್ಣೆ ಕೂಡ ನೀಡಲಾಗುತ್ತಿದೆ ಎಂದರು.

ರಾಜ್ಯದಲ್ಲಿ 3750 ಮೀನುಗಾರಿಕಾ ದೋಣಿಗಳಿವೆ. ರಾಜ್ಯದಲ್ಲಿ 60 ಕೋಟಿ ಮೀನುಮರಿ ಉತ್ಪಾದನೆ ಗುರಿ ಹೊಂದಲಾಗಿದ್ದು, ನವೆಂಬರ್ ಅಂತ್ಯದೊಳಗೆ 42 ಕೋಟಿ ಮೀನುಮರಿ ಉತ್ಪಾದಿಸಲಾಗಿದೆ ಎಂದು ತಿಳಿಸಿದರು.

Photos; DSC_0307,DSC_0320 AND DSC_0321

Market Price lesser than MSP !

Karnataka Chief Minister Mr Siddaramaiah called on the Union Minister for Consumer Affairs, Food and Public Distribution,Mr Ram Vilas Paswan in New Delhi on December-04,and had discussion regarding Issues on Sugar and Maze. Minister for Co-Operations, Mr H S Mahadeva Prasadh,Minister for Law, Parliamentary Affairs and Animal Husbandry,Mr T B Jayachandra,and Special Representative to the Government of Karnataka in New Delhi Mr Appaji C S Nadagouda were present.

ಛಾಯಾಚಿತ್ರ ಶೀರ್ಷಿಕೆ:

ಕಾರ್ಖಾನೆ, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ವತಿಯಿಂದ ರಾಸಾಯನಿಕ ವಿಪತ್ತು ನಿವಾರಣಾ ದಿನದ ಅಂಗವಾಗಿ "ಔಷಧ ಮತ್ತು ರಾಸಾಯನಿಕ ಕಾರ್ಖಾನೆಗಳಲ್ಲಿ ಕೈಗಾರಿಕಾ/ ರಾಸಾಯನಿಕ ವಿಪತ್ತುಗಳ ನಿವಾರಣೆ" ಎಂಬ ವಿಷಯದ ಕುರಿತು ಗುರುವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಕಾರ್ಮಿಕ ಖಾತೆ ರಾಜ್ಯ ಸಚಿವ ಶ್ರೀ ಪಿ.ಟಿ. ಪರಮೇಶ್ವರ ನಾಯಕ್ ಅವರು ಉದ್ಘಾಟಿಸಿದರು. ಬಯೋಕಾನ್ ಕಂಪೆನಿಯ ಅಧ್ಯಕ್ಷೆ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಕಿರಣ್ ಮಜುಂದಾರ್ ಷಾ, ಇಲಾಖೆಯ ನಿರ್ದೇಶಕ ಶ್ರೀ ಬಿ.ಎಸ್. ರಾಮಚಂದ್ರ ಹಾಗೂ ಜಂಟಿ ನಿರ್ದೇಶಕ ಶ್ರೀ ಎ.ಆರ್. ವಿಜಯೇಂದ್ರ ಅವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕಾರ್ಖಾನೆ ಸುರಕ್ಷತಾ ಕೈಪಿಡಿ ಹಾಗೂ ಭಿತ್ತಿ ಫಲಕಗಳನ್ನು ಸಹ ಬಿಡುಗಡೆ ಮಾಡಲಾಯಿತು.